ಶ್ರೀ ಎಚ್. ಸಿದ್ದವೀರಪ್ಪ .—ಅವರಿಗೆ ಅಂದರೆ ಸಾಮಾನ್ಯವಾಗಿ ಡಾಕ್ಟರುಗಳಿಗೆ ಎಷ್ಟೆ ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ನಿಗದಿ ಮಾಡಿದೆ. ತಾಲ್ಲೂಕ್ ಕಸಬಾಗಳಲ್ಲಾದರೆ ಆಲ್ಲಿ ಬೇರೆ ಡಾಕ್ಟರುಗಳು ಇರುವುದಿಲ್ಲ. ಆಲ್ಲಿನ ವಿಷಯಬೇರೆ. ದೊಡ್ಡ ದೊಡ್ಡ ನಗರಗಳಲ್ಲಿ ಆಕ್ಸಿಡೆಂಟಲ್ ಕೇಸಸ್‌ಗಳಿಗೆ ಬೇರೆ ಡಾಕ್ಟರುಗಳನ್ನು ಇಡಲಾಗಿದೆ. They are not like ministers or M.L.As.

ಶ್ರೀ ಎಂ. ಬಿ. ರಾಮಸ್ವಾಮಿ .—ಡಾಕ್ಟರುಗಳು ಆಫೀಸ್ ಅವರ್ಸ್ ಬಿಟ್ಟು ಬೇರೆ ವೇಳೆಯಲ್ಲಿ ಪ್ರಾಕ್ಟೀಸ್ ಮಾಡಬಹುದೆಂದು ಮಾನ್ಯ ಸಚಿವರು ಅಪ್ಪಣೆ ಕೊಡಿಸಿದರು. ಅಂದರೆ ಆಸ್ಪತ್ರೆಯಲ್ಲಿ ದೊರೆಯತಕ್ಕ ಔಷಧಿಗಳನ್ನು ಉಪಯೋಗಿಸಿಕೊಂಡು ಇವರು ಮನೆಯಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶಕೊಟ್ಟಿರುವುದರಿಂದ ಸರ್ಕಾರಿ ಔಷಧಗಳನ್ನು ತೆಗೆದುಕೊಂಡು ಹೋಗಿ ಅವರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವುದಕ್ಕೆ ಇವರಿಂದ ಅವಕಾಶ ಹೆಚ್ಚುವುದಿಲ್ಲವೇ? ಇದಕ್ಕೇನಾದರೂ ತಕ್ಕ ಸೂಪರ್ ವಿಜನ್ ಇಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ .—ಅಂಥಾ ಸಂದರ್ಭಗಳು ಸಿಕ್ಕಿದ ಕಡೆ ಸರ್ಕಾರದವರು ಸೂಕ್ತ ಕ್ರಮ ಗಳನ್ನು ಕೈಗೊಂಡಿದ್ದಾರೆ ಅನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ .—ಮಾನ್ಯ ಮಂತ್ರಿಗಳು ರೆಗ್ಯೂಲರ್ ಅವರ್ಸ್ ಡ್ಯೂಟಿ ಇರುತ್ತೆ ಅನಂತರ ಅವರು ಹೊರಗಡೆ ಪ್ರಾಕ್ಟೀಸ್ ಮಾಡಬಹುದೆಂದು ಅಪ್ಪಣೆ ಕೊಡಿಸಿದರು, ಹಾಗಾ.....

SRI H. SIDDAVEERAPPA.—I am sorry, I want to clarify. They are Government servants but they have to work at regulated hours.

ಶ್ರೀ ಎಚ್. ಎಸ್. ಸಿದ್ದಪ್ಪ .—ಮಾನ್ಯ ಮಂತ್ರಿಗಳು ರಾತ್ರಿ ೭ ಗಂಟೆಯ ಮೇಲೆ ಡಾಕ್ಟರನ್ನು ತಮ್ಮ ಮನೆಗಳಿಗೆ ಕರೆಸಿಕೊಂಡರೆ ಎಷ್ಟು ಫೀಜನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ .—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ .—ಸಾಮಾನ್ಯವಾಗಿ ಡಾಕ್ಟರ್ಸ್ ಕ್ವಾರ್ಟರುಗಳು ಆಸ್ಪತ್ರೆಗೆ ಹೊಂದಿಕೊಂಡ ಹಾಗೆ ಇರುವುದರಿಂದ ಅವರು ಅದೇ ಸರ್ಕಾರಿ ಕಟ್ಟಡದಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದು ಕಾನೂನಿಗೆ ವಿರೋಧವಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ .—ಇದು ಬಹಳ ಗಮನಾರ್ಹವಾದ ಪ್ರಶ್ನೆ, ವಿಚಾರಮಾಡೋಣ.

PAYMENT OF RENT OF GEETHA SISHUVIHAR SOCIETY BUILDING

664. SRI A. M. SURYANARAYANA GOWDA (Yelahanka) .—

Will the Minister for Education be pleased to state .—

(*a*) whether the rent of the building occupied by Geetha Sishuvihar Society due to Shri M. L. A. Rao for the period 1961-67 has not been paid ;

(*b*) if so, whether it has come to the notice of Government that the rent has been accounted for as having been paid and has been audited and approved by the Education Department ;

(*c*) if so, the action taken by Government in this behalf ?

SRI A. R. BADARINARAYANA (Minister for Education) .—

(*a*) The rent has been paid.

(*b*) Yes.

(*c*) Does not arise in view of reply to clause (*a*) above.

ಶ್ರೀ ಎ. ಎಂ. ಸೂರ್ಯನಾರಾಯಣ ಗೌಡ .—ಇಲ್ಲಿಯವರೆಗೂ ಈ ಎಂ. ಎಲ್. ಎ. ರಾಷ್ ಅವರಿಗೆ ಹಣ ಪಾವತಿಯಾಗಿಲ್ಲ : ಅವರು ಹಣ ಪಾವತಿ ಬಗ್ಗೆ ರಶೀದಿಯನ್ನೂ ಕೊಟ್ಟಿಲ್ಲ. ಇಲ್ಲಿ ನಡೆದಿರುವ ಹಾಗೆ ಬೆಂಗಳೂರು ಸುತ್ತ ಮುತ್ತಲೂ ಇರತಕ್ಕ ಶಿಶುವಿಹಾರಗಳಲ್ಲಿ ಹೀಗೆ ಲಕ್ಷಾಂತರ ರೂಪಾಯಿಗಳ ಹಣ ವನ್ನು ಕಳೆದ ೧೦ ವರ್ಷಗಳಿಂದ ಅವರು ಮೋಸ ಮಾಡಿದ್ದಾರೆ. ಸರ್ಕಾರದವರು ಇಂಥವರ ಬಗ್ಗೆ ಕೈ ಗೊಂಡಿರತಕ್ಕ ಕಾರ್ಯ ಕ್ರಮಗಳೇನು?

† ಶ್ರೀ ಎ. ಆರ್. ಬದರಿನಾರಾಯಣ್ .—ಅವರ ರೆಕಾರ್ಡ್ ಸರಿಯಾಗಿಲ್ಲ ಎಂದು ಹೇಳಿ ಅವರಿಗೆ ಕೊಡತಕ್ಕ ಗ್ರಾಂಟನ್ನು ನಿಲ್ಲಿಸಲಾಗಿದೆ. ಇನ್ನು ಎಲ್ಲೆಲ್ಲಿ ಹಣವನ್ನು ಅಪವ್ಯಯ ಮಾಡಿದ್ದಾರೋ ಅಲ್ಲಿ ಅಂಥವನ್ನು ಹಿಡಿದು ಕ್ರಮ ಕೈಗೊಂಡಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ .—ಈ ವಿಚಾರದಲ್ಲಿ ಸರ್ಕಾರದವರು ಒಂದು ತನಿಖೆ ನಡೆಸಿದ್ದರಲ್ಲಿ ಬಿ. ಎನ್. ಸುಂದರರಾವ್ ಎನ್ನತಕ್ಕವರು ಈ ವ್ಯವಹಾರದಲ್ಲಿ ೭—೮ ಸಾವಿರ ರೂಪಾಯಿಗಳನ್ನು ತಿಂದು ಹಾಕಿದ್ದಾರೆಂದು ವರದಿಯಾಗಿದ್ದರೂ, ಸರ್ಕಾರದಲ್ಲಿ ಅದನ್ನು ಹಷಪ್ ಮಾಡಿ ಅವರ ಬಗ್ಗೆ ಕ್ರಮ ಏಕೆ ಕೈ ಗೊಂಡಿಲ್ಲ?

ಶ್ರೀ ಎ. ಆರ್. ಬದರಿನಾರಾಯಣ್ .—ಆ ಸುಂದರ್‌ರಾವ್ ಅನ್ನತಕ್ಕವರೂ ಕೂಡ ಆ ಸಮಿತಿಯಲ್ಲಿ ಒಬ್ಬರಾಗಿದ್ದರು. ಈಗ ಆ ಸಮಿತಿಯಲ್ಲಿ ಅವರಿಲ್ಲ ಆ ಎಂ.ಎಲ್.ಎ ರಾಯರು ಅಲ್ಲಿ ಆ ಸಂಸ್ಥೆಯನ್ನು ಸರಿಯಾಗಿ ನಡೆಸುತ್ತಿದ್ದ ಕಾಲದವರೆಗೂ ಸರ್ಕಾರದವರು ಅವರಿಗೆ ಸಲ್ಲಬೇಕಾದ ಗ್ರಾಂಟನ್ನು ಕ್ರಮವಾಗಿ ಅವರು ಕೊಡಬೇಕಾಗಿದ್ದ ಹಣದ ಬಾಕಿಗಾಗಿ ಹೌಸಿಂಗ್ ಬೋರ್ಡಿಗೆ ಸರ್ಕಾರದವರಿಂದ ಕಟ್ಟುತ್ತಿದ್ದರು. ಇತ್ತೀಚೆಗೆ ಅದರ ವ್ಯವಹಾರ ಸರಿಯಾಗಿಲ್ಲ, ಆದಕ್ಕಾಗಿ ಗ್ರಾಂಟನ್ನು ನಿಲ್ಲಿಸಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ .—ಆ ತನಿಖೆ ವರದಿಯನ್ನು ಸರ್ಕಾರದಲ್ಲಿ ಏಕೆ ಹಷಪ್ ಮಾಡಿದ್ದಾರೆ ?

ಶ್ರೀ ಎ. ಆರ್. ಬದರಿನಾರಾಯಣ್ .—ಹಷಪ್ ಮಾಡಿದ್ದಾರೆಂಬುದು ಸರಿಯಾದುದಲ್ಲ.

MADAM SPEAKER .—Now Question Hour is over.

QUESTIONS FOR ANSWERS ON THE DAY
(but not taken up)

DRINKING WATER FACILITIES TO VILLAGES OF DAVANGERE TALUK

38. SMT. C. NAGAMMA KESHAVAMURTHY (Davangere) .—

Will the Minister for Community Development and Social Welfare be pleased to state .—

(*a*) the number of villages in Davangere Taluk which do not have any drinking water facility (names may be furnished) ;

(*b*) the works taken up for digging wells in Davangere Taluk from the year 1970 onwards ;

(*c*) the number of bore wells provided to the villages in Davangere Taluk (names of villages to be furnished) ?